ಅಧ್ಯಕ್ಷರು:- ಮತ್ತೆ ಹೋಯಿತಲ್ಲ, ಮಂಜುನಾಥರವರೆ, ಮಹದೇವಪ್ಪನವರಿಗೆ ಸೆಕ್ರೆಟರಿಯವರು ಚೆನ್ನಾಗಿ ತಯಾರಿ ಕೂಟ್ಟುಬಿಟ್ಟಿದ್ದಾರೆ, ಕೈಗೆ ಸಿಗುವುದೇ ಇಲ್ಲ ಎನ್ನುತ್ತಾರೆ. ಮಾಡುತ್ತೇವೆ ಎಂದು ಹೇಳಿ, ಪರವಾಗಿಲ್ಲ, ನಾನೂ ನಿಮ್ಮ ಜೊತೆ ಇರುತ್ತೇನೆ.

ಡಾ॥ ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ಅಲ್ಲಿ ಯುನಾನಿ ಪದ್ಧತಿಯನ್ನು ನಮ್ಮ ಅಲ್ಪ ಸಂಖ್ಯಾತರು ಹೆಚ್ಚು ಬಳಕೆ ಮಾಡುವುದರಿಂದ ಆ ಮತದಾರರ ಸಂಖ್ಯೆ ಹೆಚ್ಚಾಗಿರುವುದರಿಂದ ಆಸ್ಪತ್ರೆ, ಮಂಜೂರಾತಿ ಬಗೆಗೆ ಕ್ರಮ ಕೈಗೊಳ್ಳುತ್ತೇವೆ.

ವಿಷಯ:- ಧಾರವಾಡ ಜಿಲ್ಲೆ ಹಿರೇಕೆರೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರವೇಶ ಕೋರಿ ಬಂದಿರುವ ಸಂಖ್ಯೆ

ಶ್ರೀ ಯು.ಬಿ.ಬಣಕಾರ್(ಹಿರೇಕೆರೂರು):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಹಿರೇಕೆರೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ವರ್ಷ ಪ್ರವೇಶ ಕೋರಿ ಬಂದಿರುವ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಆಗಿ ಪ್ರವೇಶ ನಿರಾಕರಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಲಾಗಿದೆ;

ಇ) ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಸಂಖ್ಯೆ ಹೆಚ್ಚಿಸಲು ಏನು ಕ್ರಮ ತೆಗೆದುಕೊಳ್ಳಲಿದ್ದಾರೆ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):-

ಅ) ಹೌದು

ಆ) ನಿಖರವಾಗಿ ಹೇಳಲಾಗುವುದಿಲ್ಲ.

ಇ) ವಿದ್ಯಾರ್ಥಿಗಳ ಬೇಡಿಕೆ ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಯು.ಬಿ. ಬಣಕಾರ್:- ಮಾನ್ಯ ಅಧ್ಯಕ್ಷರೆ ಧಾರವಾಡ ಜಿಲ್ಲೆ ಹಿರೇಕೆರೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ವರ್ಷ ಪ್ರವೇಶ ಕೋರಿ ಬಂದಂತಹ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಲಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದರೆ ವಿದ್ಯಾರ್ಥಿಗಳ ಬೇಡಿಕೆ ಬಂದಲ್ಲಿ ಕ್ರಮ ತೆಗೆದುಕೊಳ್ಳುವುದು ಎಂದು ಹೇಳಿದ್ದಾರೆ. ಈಗಾಗಲೇ ಕಳೆದ 3-4 ವರ್ಷಗಳಿಂದ ವಿದ್ಯಾರ್ಥಿಗಳ ಪ್ರವೇಶ ನಿರಾಕರಿಸಿರುವುದು ಅವರಲ್ಲಿಯೇ ದಾಖಲಾತಿ ಇದೆ. ಆದುದರಿಂದ ಮುಂದಿನ ಸಾರಿ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಪ್ರವೇಶ ಕೊಡುವುದರ ಬಗ್ಗೆ ಅವರಿಗೆ ಸರಿಯಾದ ಕ್ರಮ ತೆಗೆದುಕೊಳ್ಳಲು ಆಶ್ವಾಸನೆ ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಡಿ.ಮಂಜುನಾಥ್:- ಮಾನ್ಯ ಅಧ್ಯಕ್ಷರೆ, ಅಲ್ಲಿ ಪ್ರವೇಶ ಸಿಕ್ಕಿಲ್ಲವೆನ್ನುವ ವಿಷಯ ನಮ್ಮ ಸರ್ಕಾರಕ್ಕೆ ಗೊತ್ತಾಗಿಲ್ಲ. ಅಲ್ಲಿ ಮುಖ್ಯೋಪಾಧ್ಯಾಯರು ಏನು ಮಾಡಿದ್ದಾರೆಂದರೆ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿದ್ದಾರೆ. ಆದಕ್ಕೆ ಬದಲಾಗಿ ಡೆರೆಕ್ಟರ್‌ರವರಿಗೆ ಹೇಳಿದ್ದರೆ ನಾವು ಇನ್ನೊಂದು ಸೆಕ್ಷನ್ ಮಾಡೋಣವೆಂದು ಪ್ರಯತ್ನ ಮಾಡುತ್ತಿದ್ದೆವು. ಏಕೆಂದರೆ ಸರ್ಕಾರಿ ಕಾಲೇಜುಗಳಿಗೆ ಬರುವವರೆಲ್ಲ ಬಡವರಾಗಿರುತ್ತಾರೆ. ಆದುದರಿಂದ ಬಡ ವಿದ್ಯಾರ್ಥಿಗಳಿಗೆ

ಎಲ್ಲೂ ತೊಂದರೆಯನ್ನು ಕೊಡಬಾರದೆಂದು ಹೇಳಿದ್ದೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಪ್ರವೇಶವನ್ನು ಕೊಡಬೇಕೆಂದು ಹೇಳಿದ್ದೇವೆ. ಈ ವರ್ಷ ಈಗಾಗಲೇ ಪ್ರವೇಶಕ್ಕೆ ಟೈಮ್ ಆಗಿಹೋಗಿದೆ. ಆದುದರಿಂದ ಮುಂದಿನ ವರ್ಷದಲ್ಲಿ ನಾನು ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಯು.ಬಿ.ಬಣಕಾರ್:- ಅದು ಪ್ರಾರಂಭವಾಗಿ ಈಗಾಗಲೇ ಹದಿಮೂರು ವರ್ಷಗಳಾಗಿದೆ. ಅಲ್ಲಿ ಕುಳಿತುಕೊಳ್ಳುವುದಕ್ಕೆ ಕೊಠಡಿಗಳಲ್ಲ ಮತ್ತು ಬೆಂಚುಗಳ ವ್ಯವಸ್ಥೆ ಇಲ್ಲ. ಅದರ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು.

ಅಧ್ಯಕ್ಷರು:- ದೇಶ ಇರುವುದೇ ಹಾಗೆ ಏನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಅವರು ಎಲ್ಲಾದರೂ ಕೂರಲಿ ಅಲ್ಲಿ ಟೀಚರ್ಸ್ ಇಲ್ಲ, ನಾನು ಕೂಡ ಇದರ ಬಗ್ಗೆ ಪತ್ರವನ್ನು ಅವರಿಗೆ ಬರೆದಿದ್ದೇನೆ. ವಿಜ್ಞಾನ, ಗಣಿತ, ರಸಾಯನ ಶಾಸ್ತ್ರ ಹೀಗೆ ಯಾವುದಕ್ಕೂ ಉಪಾಧ್ಯಾಯರು ಇಲ್ಲ. ಒಬ್ಬ ಮುಖ್ಯೋಪಧ್ಯಾಯರು ಇರುತ್ತಾರೆ. ಅವರು ಎಲ್ಲಾ ಕಡೆ ಓಡಾಡಬೇಕು. ಡೈರೆಕ್ಟರ್‌ನಿಂದ ರೆಕಮೆಂಡೇಷನ್ ಬರಬೇಕು. ನಾವು ಎಲ್ಲರೂ ಹೇಳಬೇಕು, ಈ ಪರಿಸ್ಥಿತಿ ಇದ್ದರೆ ಹೇಗೆ? ಒಂದು ಕಡೆ ನಾವು ಹಳ್ಳಿಗಳಲ್ಲಿ ಕಾಲೇಜುಗಳನ್ನು ಕೊಡಬೇಕೆಂದು ಕೋರುತ್ತೇವೆ. ಅದನ್ನು ಕೊಟ್ಟಮೇಲೆ ಅದಕ್ಕೆ ಸರಿಯಾದಂತಹ ವ್ಯವಸ್ಥಿತವಾಗಿ ಶಿಕ್ಷಕರನ್ನು ಬೇಗನೆ ನೇಮಕಾತಿ ಮಾಡದಿದ್ದರೆ ಹಳ್ಳಿಗಳಲ್ಲಿ ಇರುವ ಮಕ್ಕಳು ತೊಂದರೆಗೆ ಈಡಾಗುತ್ತಾರೆಯೆ ಹೊರತು ಪಟ್ಟಣಗಳಲ್ಲಿರುವಂತವಲ್ಲ. ನಮ್ಮಂಥವರು ಇಲ್ಲಿಗೆ ಕರೆದುಕೊಂಡು ಬಂದು ಸಿಟಿಗಳಲ್ಲಿ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಓದಿಸಬಹುದು. ಆದರೆ ಹಳ್ಳಿಗಳಲ್ಲಿ ಸೆಮಿ ಅರ್ಬನ್ ಏರಿಯಾಗಳಲ್ಲಿ ಇಂತಹ ಕಡೆಗಳಲ್ಲಿ ಮೊದಲು ಶಿಕ್ಷಕರನ್ನು ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಿ, ಆಮೇಲೆ ಬೆಂಚು ಕುರ್ಚಿಗಳನ್ನು ಕಳುಹಿಸಿ ಕೊಡಿ.

ಶ್ರೀ ಡಿ.ಮಂಜುನಾಥ್:- ಮಾನ್ಯ ಸದಸ್ಯರು ಏನು ಹೇಳಿದ್ದಾರೊ ಅದನ್ನು ನಾನು ಒಪ್ಪುತ್ತೇನೆ. ಬಹಳ ಕಡೆಗಳಲ್ಲಿ ಇಂತಹ ಪರಿಸ್ಥಿತಿ ಇದೆ. 1992ರಿಂದ ರಿಕ್ರೂಟ್‌ಮೆಂಟ್ ಮಾಡಿಲ್ಲ. ಈಗ ಈ ವರ್ಷ ರಿಕ್ರೂಟ್‌ಮೆಂಟ್ ಆಗಿದೆ. ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಈಗಾಗಲೆ 753 ಲೆಕ್ಚರರ್‌ಗಳ ಸೆಲೆಕ್ಷನ್ ಆಗಿದೆ. ಅದರ ಜೊತೆಗೆ ನಾವು ಏನು ಮಾಡಿದ್ದೇವೆಂದರೆ ಕಳೆದ ವರ್ಷದಲ್ಲಿ ಪಾರ್ಟ್ ಟೈಮ್‌ನಲ್ಲಿ ಯಾರು ಕೆಲಸ ಮಾಡುತ್ತಿದ್ದರು, ಅವರನ್ನು ಮುಂದುವರೆಸಿ ಎಂದು ಹೇಳಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇನ್ನು ಅದೂ ಕೂಡ ಆಗಿಲ್ಲ. ಅದನ್ನು ಸ್ವಾಪ್ ಮಾಡಿ ಮತ್ತೆ ತೊಂದರೆಯಾಗಿದೆ.

ಶ್ರೀ ಡಿ.ಮಂಜುನಾಥ್:- ಹೋಗಿದೆ ಅದರ ದಿನಾಂಕವನ್ನು ಹೇಳುತ್ತೇನೆ. ಅದಕ್ಕೆ ಇನ್ನು ಈಗ ಬೇಡಿಕೆ ಬರುತ್ತಿದೆ.

ಶ್ರೀ ಬಿ.ಆರ್.ಪಾಟೀಲ್(ಯತ್ನಾಳ್):- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:- ನಿಮ್ಮ ಪ್ರಶ್ನೆಯನ್ನು ತಡೆ ಹಿಡಿದಿದ್ದೇವೆ. ಅದನ್ನು ನಾನು ಆಗಲೆ ಹೇಳಿದೆ. ನೀವು ಕೇಳಿಸಿಕೊಳ್ಳಲಿಲ್ಲ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ

ಬಿಳಗಿಯಲ್ಲಿ ಒಂದು ಸರ್ಕಾರಿ ಫಸ್ಟ್ ಗ್ರೇಡ್ ಕಾಲೇಜ್ ಇದೆ. ಶೇ.50ಕ್ಕಿಂತಲೂ ಹೆಚ್ಚಿಗೆ ಉಪನ್ಯಾಸಕರ ಕೊರತೆ ಇದೆ. ಅದನ್ನು ಕೇಳಿದಾಗ ಕೆ.ಪಿ.ಎಸ್.ಸಿ ಯಿಂದ ಸೆಲೆಕ್ಟ್ ಆದನಂತರ ಹಾಕುತ್ತೇವೆಂದು ಹೇಳಿದಿರಿ. ಅಲ್ಲಿಯವರೆಗೆ ಅಲ್ಲಿ ವಿದ್ಯಾರ್ಥಿಗಳು ಏನು ಮಾಡಬೇಕು. ಕಳೆದ ಒಂದು ವರ್ಷದಿಂದ ಇದನ್ನು ಅನುಭವಿಸುತ್ತಿದ್ದಾರೆ. ದಯಮಾಡಿ ಉಪನ್ಯಾಸಕರನ್ನು ಹಾಕುವುದಕ್ಕೆ ಏನಾದರೂ ಕ್ರಮ ಕೈಗೊಳ್ಳುವಿರಾ?

ಶ್ರೀ ಡಿ.ಮಂಜುನಾಥ್:- ಎಲ್ಲಾ ಕಡೆ ಇಂತಹ ಪರಿಸ್ಥಿತಿ ಇದೆ. ಇದನ್ನು ಸರಿ ಪಡಿಸುವುದಕ್ಕೆ ನಾನು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ:- ಮಾನ್ಯ ಅಧ್ಯಕ್ಷರೆ, ನವಲಗುಂದ ತಾಲ್ಲೂಕ್‌ನಲ್ಲಿ ಚಲವಳಿ ಎನ್ನುವಂತಹ ಗ್ರಾಮದಲ್ಲಿ ಈಗಾಗಲೆ ಜೂನಿಯರ್ ಕಾಲೇಜು ಸ್ಯಾಂಕ್ಷನ್ ಆಗಿದೆ. ಒಂದು ಸೈನ್ಸ್, ಆರ್ಟ್ಸ್ ಕಾಮರ್ಸ್ ಈ ಮೂರು ಸೆಕ್ಷನ್ ಸ್ಯಾಂಕ್ಷನ್ ಮಾಡಿದ್ದಾರೆ. ಅದಕ್ಕೆ ಮುಖ್ಯೋಪಾಧ್ಯಾಯರು ಇಲ್ಲ, ಶಿಕ್ಷಕರು ಇಲ್ಲ, ಆ ಜೂನಿಯರ್ ಕಾಲೇಜಿಗೆ ಯಾರು ಇಲ್ಲ. ಒಬ್ಬ ಹೈಸ್ಕೂಲ್ ಟೀಚರ್ ಇನ್‌ಛಾರ್ಜ್ ತೆಗೆದುಕೊಂಡಿದ್ದಾರೆ. ಅಲ್ಲಿ 80 ಜನ ವಿದ್ಯಾರ್ಥಿಗಳು ಇದ್ದಾರೆ.

ಅಧ್ಯಕ್ಷರು:- ಇದು ಉನ್ನತ ಶಿಕ್ಷಣ ಸಚಿವರಿಗೆ ಬರುವುದಿಲ್ಲ. ಮಾನ್ಯ ಹೆಚ್.ಜಿ.ಗೋವಿಂದೇಗೌಡರಿಗೆ ಬರುತ್ತದೆ. ಮಂತ್ರಿಗಳು ಇಲ್ಲಿದ್ದಾರೆ. ಮಂತ್ರಿಗಳೆ ಮಾನ್ಯ ಸದಸ್ಯರು ಹೊಸಬರು, ಅವರ ವಿಷಯವನ್ನು ನೋಟ್ ಮಾಡಿಕೊಳ್ಳಿ, ನಾನು ಮಂತ್ರಿಗಳಿಗೆ ಹೇಳಿದ್ದೇನೆ, ಮಾಡಿಸಿಕೊಡುತ್ತಾರೆ.

ಡಾ॥ ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಕುದೂರುನಲ್ಲಿ ಫಸ್ಟ್ ಗ್ರೇಡ್ ಕಾಲೇಜು ಇದೆ. ಅಲ್ಲಿ ಉಪನ್ಯಾಸಕರು ಇಲ್ಲ. ಹಿಂದೆ ಇದ್ದಂತಹ ಪದ್ಧತಿಯನ್ನು ಫಾಲೋ ಮಾಡಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡಿದ್ದಾರಲ್ಲಾ, ಅದನ್ನು ಮಾಡಿಕೊಟ್ಟರೆ, ತಾತ್ಕಾಲಿಕವಾಗಿ ಹುಡುಗರಿಗೆ ಅನುಕೂಲವಾಗಬಹುದು.

ಅಧ್ಯಕ್ಷರು:- ಇವತ್ತು ಎಜುಕೇಷನ್ ಡಿಮಾಂಡ್ಸ್ ಚರ್ಚೆಗೆ ಬರುತ್ತದೆ. ಆಗ ತಾವು ಮಾತನಾಡಿ.

ಶ್ರೀ ಡಿ.ಮಂಜುನಾಥ್:- ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಶ್ರೀ ವೈ.ರಾಮಕೃಷ್ಣ:- ಪ್ರಾಮಾಣಿಕ ಪ್ರಯತ್ನ ಎಂದರೆ ಯಾವಾಗ ಮುಂದಿನ ವರ್ಷವೇ, ಆಚಿನ ವರ್ಷವೇ, I want a definite information from you on that. ಯಾವಾಗ ತಾವು ಈ ಕಾಲೇಜುಗಳಿಗೆಲ್ಲಾ ಉಪನ್ಯಾಸಕರನ್ನು ಒದಗಿಸಿ ಕೊಡುತ್ತೀರಿ? You fix a date?

ಡಾ॥ ಹೆಚ್.ಸಿ. ಬಾಲಕೃಷ್ಣ:- ಹಿಂದೆ ಇದ್ದಂತಹ ಪದ್ಧತಿಯನ್ನು ಫಾಲೋ ಮಾಡಿದರೆ ಹುಡುಗರಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ಈಗ ನೀವು ಇಬ್ಬರೂ two sides of the same coin. ನಮಗೆ ಹೇಗೆ ಗೊತ್ತಾಗಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ ನೀವು ಏನು ಹೇಳುವುದು.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ತಾವು ಯಾವ ನಾಣ್ಯದ ಎರಡು ಮುಖಗಳೆಂದು ಹೇಳಿದ್ದೀರಿ.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೆ ಇವತ್ತು ತಾವು ಮಾತನಾಡುವಂತಹ ಹಕ್ಕೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ತಪ್ಪು ಅಭಿಪ್ರಾಯ ಬರುತ್ತದೆ. ತಾವು ನನಗೆ ಮಾತನಾಡುವ ಹಕ್ಕೆ ಇಲ್ಲವೆಂದ ತಕ್ಷಣ ಪತ್ರಿಕೆಯವರಿಗೆ ಅನುಮಾನ ಬರುತ್ತದೆ. ಅದೇನೊ ಆಗಿರಬೇಕು ಎಂದು ಅವರು ತಿಳಿದುಕೊಂಡುಬಿಟ್ಟಾರು.

ಅಧ್ಯಕ್ಷರು:- ಈ ರೀತಿ ಅಡಳಿತಾತ್ಮಕವಾದ ಸಮಸ್ಯೆಗಳನ್ನು ಇಬ್ಬರು ಒಂದೇ ಅನುಭವವನ್ನು ಹೊಂದಿದ್ದೀರಿ. ಬೇರೆ ಇನ್ನೇನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಬೇರೆ ಯಾವ ನಾಣ್ಯ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ಮಂಜುನಾಥ್:- ನಾನು, ಮಾನ್ಯ ವಾಟಾಳ್ ನಾಗರಾಜ್‌ರವರು, ಮತ್ತು ಮಾನ್ಯ ರಾಮಕೃಷ್ಣರವರು 1967ರಲ್ಲಿ ಒಂದಾಗಿ ಇದ್ದವರು. ಅವರು ಮಂತ್ರಿಗಳಾಗಿ ಇದ್ದವರು.

ಶ್ರೀ ವಾಟಾಳ್ ನಾಗರಾಜ್:- ನಾನು ಮಂತ್ರಿಯಾಗಿಲ್ಲವಲ್ಲಾ ಸ್ವಾಮಿ, ನಾವು ಒಟ್ಟಿಗೆ ಇದ್ದವರು ಎಂದು ಹೇಳುತ್ತಿದ್ದೀರಿ. ತಾವು ಹೇಳಿ ನಾನು ಯಾವಾಗ ಮಂತ್ರಿಯಾಗಿದ್ದೆ. ತಾವು ಉಪಾಧ್ಯಕ್ಷರು ಆಗಿದ್ದೀರಿ, ನಾನು ನಿಮ್ಮ ಜೊತೆಯಲ್ಲಿದ್ದೆ. ನಾನಂತೂ ಮಂತ್ರಿಯಾಗಿಲ್ಲ.

ಅಧ್ಯಕ್ಷರು:- ಮಾನ್ಯ ಮಂಜುನಾಥ್‌ರವರೆ, ತಾವು ಅವರ ಮುಖವನ್ನು ನೋಡಬೇಡಿ, ಈ ಕಡೆ ತಿರುಗಿ ಹೇಳಿ.

ಶ್ರೀ ಡಿ.ಮಂಜುನಾಥ್:- ತಾವು ಎಷ್ಟು ದಿವಸಗಳಲ್ಲಿ ಉಪನ್ಯಾಸಕರನ್ನು ಕಳುಹಿಸುತ್ತೀರಿ ಎಂದು ಕೇಳಿದ್ದೀರಿ. ಈಗ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಲಿಸ್ಟ್ ರೆಡಿಯಾಗಿದೆ. ನಾನು ಮತ್ತೆ ಅವರ ಹತ್ತಿರ ಈ ವಿಚಾರವಾಗಿ ಮಾತನಾಡಿದ್ದೇನೆ. ಈಗ ಅದನ್ನು ವೆರಿಫಿಕೇಶನ್‌ಗೆ ಕಳುಹಿಸಬೇಕೋ ಬೇಡವೋ ಎಂದು ಇದೆ. ಏಕೆಂದರೆ ಮುಂಚೆ ಎಲ್ಲಾ ಏನು ಮಾಡುತ್ತಿದ್ದರೆಂದರೆ, ವಿದ್ಯಾರ್ಥಿಗಳೆ ಇಂತಹ ಜಾತಿಯೆಂದು ಡಿಕ್ಲರೇಷನ್ ಕೊಡುತ್ತಿದ್ದರು ಮತ್ತು ಅವರೆ ಒಂದು ಟ್ರೂ ಕಾಪಿಯನ್ನು ಕೊಡುತ್ತಿದ್ದರು. ಈ ತಹಶೀಲ್ದಾರರಿಂದ ಸರ್ಟಿಫಿಕೇಟ್ ಆಗಬೇಕಾಗಿದೆ. ಆದುದರಿಂದ ಈಗ ವೆರಿಫಿಕೇಷನ್‌ಗೆ ಕಳುಹಿಸುವುದು ಮತ್ತೆ ಒಂದು ವರ್ಷವಾಗುತ್ತದೆ. ಈಗ ತಹಶೀಲ್ದಾರರಿಗೆ ಡಿ.ಸಿಗೆ ಹೋಗಬೇಕು. ಆದುದರಿಂದ ನಾವು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ನಮಗೆ ಆಪಾಯಿಂಟ್‌ಮೆಂಟ್ ಅಥಾರಿಟಿಯನ್ನು ಬಿಡಿ, ಅದನ್ನು ನಾವು ಆದಷ್ಟು ಜಾಗ್ರತೆ ಮಾಡುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಸಯ್ಯದ್ ಜಲ್ಫಿಕರ್ ಹಶ್ಮಿ:- ಮಾನ್ಯ ಅಧ್ಯಕ್ಷರೆ, ಈ ವರ್ಷದಲ್ಲಿ ಜೀದರ್‌ನಲ್ಲಿ ಪಿ.ಜಿ.ಸೆಂಟರ್ ಪ್ರಾರಂಭ ಮಾಡಬೇಕೆಂದು ನಾವು ಕೇಳಿದ್ದೆವು. ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟರು.

ಅಧ್ಯಕ್ಷರು:- ಅದು ಪ್ರತ್ಯೇಕವಾದ ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್:- ಅವರು ಕನ್ನಡದಲ್ಲಿ ಸುಂದರವಾಗಿ ಕೇಳುತ್ತಿದ್ದಾರೆ. ಕೇಳಲಿ ಬಿಡಿ ಸ್ವಾಮಿ.

ಶ್ರೀ ಸಯದ್ ಜಲ್ಫಿಕರ್ ಹಶ್ಮಿ:- ಅದು ಡಿಸ್ಟ್ರಿಕ್ಟ್ ಆಗಿದೆ. ಈ ವರ್ಷ ಅಲ್ಲಿ ಪಿ.ಜಿ.ಸೆಂಟರ್ ಪ್ರಾರಂಭವಾಗಬೇಕು. ನಾಲ್ಕು ವರ್ಷದಿಂದ ಮಾನ್ಯ ವೀರಪ್ಪಮೊಯಿಲಿಯವರ ಸರ್ಕಾರವಿದ್ದಾಗ ಅವರು ಎಜುಕೇಷನ್ ಸಚಿವರಾಗಿದ್ದಾಗ ಆಶ್ವಾಸನೆಯನ್ನು ಕೊಟ್ಟರು. ಈಗ ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಇನ್ನೂ ಆಗಿಲ್ಲ.

ಶ್ರೀ ಡಿ.ಮಂಜುನಾಥ:- ಇದೇ ಪ್ರಶ್ನೆಯನ್ನು ಮಾನ್ಯ ಬಸವರಾಜ ಪಾಟೀಲ್ ಅಟ್ಟೂರ್ ಅವರು ಕೇಳಿದರು. ಈಗ ಅವರಿಗೆ ಏನು ಹೇಳಿದೆ. ಗುಲ್ಬರ್ಗಾ ಯುನಿವರ್ಸಿಟಿಯಲ್ಲಿ ಷುಗರ್ ಟೆಕ್ನಾಲಜಿ ಎಂದು ಒಂದು ಕೋರ್ಸ್ ಮಾಡಿದ್ದಾರೆ. ಈಗ ಅಲ್ಲಿ ಬೇರೆ ಕೋರ್ಸ್‌ಗಳನ್ನು ಮಾಡುವುದಕ್ಕೆ ಅವಕಾಶವಿದೆಯೋ ಇಲ್ಲವೋ ಎಂಬುದನ್ನು ವಿಶ್ವವಿದ್ಯಾನಿಲಯದಿಂದ ತಿಳಿದುಕೊಂಡು ನಾನು ಅವರಿಗೆ ತಿಳಿಸುತ್ತೇನೆ. ಆಮೇಲೆ ವಿಶ್ವವಿದ್ಯಾನಿಲಯದವರು ಕ್ರಮ ತೆಗೆದುಕೊಳ್ಳುತ್ತಾರೆ.

ಡಾ॥ ಹೆಚ್.ಸಿ.ಬಾಲಕೃಷ್ಣ:- ಈಗ ಮಾನ್ಯ ಮಂತ್ರಿಗಳು ಎಲ್ಲರಿಗೂ ಉಪನ್ಯಾಸಕರನ್ನು ಕೊಡುತ್ತೇವೆಂದು ಹೇಳಿದ್ದಾರೆ. ಬಹುಶಃ ಹಿಂದೆ ಇದ್ದಂತಹ ಪದ್ಧತಿಯನ್ನು ಅನುಸರಿಸಿದರೆ ಹುಡುಗರಿಗೆ ಅನುಕೂಲವಾಗಬಹುದು. ಎರಡು ಅಥವಾ ಮೂರು ತಿಂಗಳು ಆಗಬಹುದು. ಈಗ ಕಾಲೇಜ್‌ಗಳಲ್ಲಿ ಪಾಠ ಮಾಡುವವರು ಇಲ್ಲ. ಅಲ್ಲಿ ಹುಡುಗರು ಬಿಟ್ಟು ಹೋಗುವಂತಹ ಪರಿಸ್ಥಿತಿ ಬರುತ್ತದೆ. ಅವರು ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಬರುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ದಯವಿಟ್ಟು ಹಿಂದೆ ಇದ್ದಂತಹ ಪದ್ಧತಿಯನ್ನು ಅನುಸರಿಸಿದರೆ ಅನುಕೂಲವಾಗುತ್ತದೆ.

ಶ್ರೀ ಡಿ. ಮಂಜುನಾಥ್:- ಅದಷ್ಟು ಜಾಗ್ರತೆ ಉಪನ್ಯಾಸಕರನ್ನು ಕಳುಹಿಸಬೇಕೆಂಬುದೆ, ನಮ್ಮ ಉದ್ದೇಶವಿರುವುದು. ಅದರಲ್ಲೂ ಗ್ರಾಮಾಂತರ ಪ್ರದೇಶದ ಕಾಲೇಜುಗಳಿಗೆ ಉಪನ್ಯಾಸಕರನ್ನು ಕಳುಹಿಸಬೇಕೆಂದೇ ನಮ್ಮ ಉದ್ದೇಶವಿರುವುದು. ಅದನ್ನು ನಾವು ಮಾಡುತ್ತೇವೆ.

ವಿಷಯ:- ಮಂಗಳೂರು ನಗರದ ಸರ್ಕಾರಿ ಪ್ರೌಢಶಾಲೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 230 (2030)

ಶ್ರೀ ಕುಂಬಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದಲ್ಲಿ ತರಗತಿಯಲ್ಲಿ 25ಕ್ಕಿಂತ ಕಡಿಮೆ ಸಂಖ್ಯೆ ವಿದ್ಯಾರ್ಥಿಗಳು ಇರುವ ಸರ್ಕಾರಿ ಪ್ರೌಢಶಾಲೆಗಳು ಎಷ್ಟು ಇವೆ (ವಿವರ ಒದಗಿಸುವುದು).

ಆ) ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರೌಢಶಾಲೆಗಳಿಗೆ ಕೊರತೆ ಇರುವ ಸ್ಥಳಗಳಿಗೆ ಸ್ಥಳಾಂತರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ

ಇ) ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಿಗೆ ಸ್ಥಳಾಂತರಿಸಲಾಗುವುದು

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಮೂರು ಪ್ರೌಢಶಾಲೆಗಳು.

1. ಸರ್ಕಾರಿ ಪ್ರೌಢಶಾಲೆ ಮಲ್ಲಿಕಟ್ಟೆ